ಸಿ.ಸಿ ನಂಬ್ರ: 345/2023
ಪಿ.ಡಬ್ಲ್ಯೂ : 2

ದಿನಾಂಕಃ 04-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

1. ಮುಖ್ಯ ವಿಚಾರಣೆಯಲ್ಲಿ ಹೇಳಿದ ಚೀಟ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಅಗ್ರಿಮೆಂಟ್ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ. ಆ ಅಗ್ರಿಮೆಂಟ್ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ಅಗ್ರಿಮೆಂಟ್ ನಲ್ಲಿ ಎಲ್ಲಾ ಸದಸ್ಯರ ಸಹಿ, ಹೆಸರು ಮತ್ತು ವಿಳಾಸ ಇರಬೇಕು ಎಂದರೆ ಸರಿ. ನಾನು ಹೇಳುವ ಅಗ್ರಿಮೆಂಟ್ ನಲ್ಲಿ ಆರೋಪಿತ ರಮೇಶ್ ರವರ ಹೆಸರು ಕಂಡು ಬರುತ್ತದೆ. ಅವರ ಹೆಸರು, ವಿಳಾಸ ಹಾಗೂ ಅವರ ಸಬ್ ಸ್ಕ್ರೈಬರ್ ಅಂತ ಆ ದಾಖಲೆಯಲ್ಲಿ ಕಂಡು ಬರುತ್ತದೆ. ನಾನು ಹೇಳುವಂತಹ ಅಗ್ರಿಮೆಂಟ್ ನ್ನು ಚೀಟ್ ನ ರಿಜಿಸ್ಟರ್ ರವರಿಗೆ ಕೊಟ್ಟ ದಾಖಲೆ ಇರುತ್ತದೆ.

2. ನನಗೆ ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಅಧಿಕಾರ ಕೊಟ್ಟಿರುತ್ತಾರೆ. ಡೈರೆಕ್ಟರ್ ಅವರು ಸೇರಿ ನನಗೆ ಅಧಿಕಾರ ಕೊಟ್ಟಿರುತ್ತಾರೆ. ಸಾಕ್ಷಿ ಪುನಃ ಅವರು ನನಗೆ ರಿಸಿವಿಂಗ್ ಲೆಟರ್ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ದಾಖಲೆ ನಿ.ಪಿ.1 ಎಂದರೆ ಸಾಕ್ಷಿ ದಾಖಲೆ ನೋಡಿ ಹೌದು ಎಂದು ನುಡಿಯುತ್ತಾರೆ. ನಿ.ಪಿ.1 ನ್ನು ಈ ಪ್ರಕರಣದಲ್ಲಿ ಹಾಜರಾಗಲು ಕೊಟ್ಟಿರುತ್ತಾರೆ. ನನ್ನನ್ನು ಪೋರ್ ಮೇನ್ ಆಗಿ ನೇಮಕ ಮಾಡಿರುತ್ತಾರೆ.

3. ನಾನು ಕಳೆದ 6 ತಿಂಗಳಿಂದ ಪಿರ್ಯಾದಿ ಸಂಸ್ಥೆಯಲ್ಲಿ ಪೋರ್ ಮೇನ್ ಆಗಿ ಕೆಲಸ ಮಾಡುತ್ತಿದ್ದೇನೆ. ನಿ.ಪಿ.1 ನ್ಯಾಯಾವಾದ ದಾಖಲೆಯಲ್ಲ ಹಾಗೂ ಅದರಂತೆ ನನ್ನನ್ನು ಪೋರ್ ಮೇನ್ ಆಗಿ ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ ನಿ.ಪಿ. 1 ರಂತೆ ಪಿರ್ಯಾದಿ ಸಂಸ್ಥೆಯನ್ನು ಪ್ರತಿನಿಧಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ಪಿರ್ಯಾದಿಯಲ್ಲಿ ಕಾಣಿಸಿದ ವಿಚಾರವನ್ನು ತಿಳಿದುಕೊಂಡಿರುತ್ತೇನೆ.

4. ದೂರಿನಲ್ಲಿ ಆರೋಪಿತ ಬೇರೆ ಸಬ್‌ಸ್ಕೈಬರ್ ಆಗಿ ಜಾಮೀನುದಾರನಾಗಿ ಭಾಗವಹಿಸಲಿಲ್ಲವಾ ಎಂದರೆ ಸಾಕ್ಷಿ ಅವರ ಹೆಂಡತಿಗೆ ಜಾಮೀನುದಾರನಾಗಿ ಇದ್ದರು ಎಂದು ನುಡಿಯುತ್ತಾರೆ. ಆರೋಪಿತ ಚೀಟ್ ಹೋಲ್ಡರ್ ಆಗಿ ಚೆಕ್ ಕೊಟ್ಟಿರುತ್ತಾರೆ, ಶ್ಯೂರಿಟಿಗಾಗಿ ಅಲ್ಲ. ದೂರಿನಲ್ಲಿ ಆರೋಪಿತ ಶ್ಯೂರಿಟಿದಾರನಾಗಿ ಚೆಕ್ ಕೊಟ್ಟಿರುತ್ತಾರೆ ಎಂದು ಕಾಣಿಸಿರುವುದು ತಪ್ಪು ಇರುತ್ತದೆ. ಸುಬ್ರಮಣ್ಯ ಎನ್ನುವವರು ಈ ಪ್ರಕರಣದಲ್ಲಿ ತನಿಖೆಗೆ ಒಳಪಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅವರು ತಮ್ಮ ಪಾಟೀ ಸವಾಲಿನಲ್ಲಿ ಕೆಲವು ವಿಚಾರ ಒಪ್ಪಿಕೊಂಡಿದ್ದರಿಂದ ಮುಂದುವರಿದ ಪಾಟೀ ಸವಾಲಿಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಹುಷಾರು ಇಲ್ಲದ ಕಾರಣ ನಾನು ಹಾಜರಾಗಿರುತ್ತೇನೆ ಎಂದು ನುಡಿಯುತ್ತಾರೆ.

5. ಪಿರ್ಯಾದಿಯಲ್ಲಿ ಹೇಳಿದ ಚೀಟ್ ವ್ಯವಹಾರ ಈಗಲೂ ಸಹ ಜಾರಿಯಲ್ಲಿ ಇರುತ್ತದೆ. ಆ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ. ಈ ಬಗ್ಗೆ ರಿಜಿಸ್ಟ್ರಾರ್ ಪಿರಿಯಾಡಿಕ್ ಆಗಿ ವರದಿ ಕೊಡಬೇಕು ಎಂದರೆ ಸರಿ. ಸಾಕ್ಷಿ ಪ್ರತಿ ತಿಂಗಳು ವರದಿ ಕೊಡಬೇಕು, ಕಳೆದ ತಿಂಗಳು ಸಹ ವರದಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಿದ್ಯಾಶ್ರೀಯವರು ಸಂಸ್ಥೆಗೆ ಪಾವತಿಸಬೇಕಾದ ಹಣವನ್ನು ಅವರ ಸಂಪೂರ್ಣವಾಗಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸಂಪೂರ್ಣವಾಗಿ ಮುಗಿದಿದ್ದರೂ ಸಹ ಅವರಿಂದ ಅನಧಿಕೃತವಾಗಿ ಹಣ ವಸೂಲಿ ಮಾಡುವ ಸಲುವಾಗಿ ನಾನು,ಸುಬ್ರಮಣ್ಯ ಹಾಗೂ ನಮ್ಮ ಸೊಸೈಟಿಯವರು ಅನಗತ್ಯವಾಗಿ 2 ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆ ಚೀಟ್ ನ ಸಂಬಂಧಪಟ್ಟಂತೆ ವರದಿ ಹಾಗೂ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. ಆ ಚೀಟ್ ಗೆ ಸಂಬಂಧಪಟ್ಟ ವರದಿಯನ್ನು ರಿಜಿಸ್ಟ್ರಾರ್ ಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಳುಹಿಸದೇ ಇರಲು ಕಾರಣ ಆ ಚೀಟ್ ಮುಕ್ತಾಯಗೊಂಡಿರುತ್ತದೆ ಎಂದರೆ ಸರಿಯಲ್ಲ.

6. ಆರೋಪಿತ ಹಾಗೂ ಅವರ ಪತ್ನಿ ಕೊಟ್ಟ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಎರಡು ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಗೆ ಡೈರೆಕ್ಟರ್ ಹಾಗೂ ಪೋರ್ ಮೇನ್ ಅಲ್ಲ ಎಂದರೆ ಸರಿಯಲ್ಲ. ವಿದ್ಯಾಶ್ರೀಯವರು ಡೈರೆಕ್ಟರ್ ಅಲ್ಲ ಎಂದರೆ ಸರಿಯಲ್ಲ. ವಿದ್ಯಾಶ್ರೀರವರು ನನ್ನ ಪರ ಅಧಿಕಾರ ಪತ್ರ ಕೊಡಲು ಅವರಿಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

7.ವಿದ್ಯಾಶ್ರೀರವರಿಗೆ ಯಾವ ದಾಖಲೆಯಂತೆ ಅಧಿಕಾರ ಇರುತ್ತದೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ಸಾಧ್ಯ ಆದರೆ ಆರೋಪಿಗೆ ತೊಂದರೆ ಮಾಡಿ ಅವರ ಕಡೆಯಿಂದ ಹಣ ವಸೂಲಿ ಮಾಡುವ ಸಲುವಾಗಿ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ.ಚೀಟ್ ಪಂಢ್ ಕಾಯಿದೆಗೆ ವಿರುದ್ದವಾಗಿ ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ